

ವಿದ್ಯಾರ್ಥಿನಿಲಯಗಳು ನಡೆಯುತ್ತಿರುವುದೂ ಇದೆ.

ಹಾಸ್ಟೆಲ್‌ಗಳಿದ್ದಲ್ಲಿ ಭ್ರಷ್ಟಾಚಾರ ಇರಲೇಬೇಕು ಎನ್ನುವ ಪರಿಸ್ಥಿತಿ ಸರ್ಕಾರಿ ಹಾಸ್ಟೆಲ್‌ಗಳಲ್ಲಿದೆ. ಊಟ–ತಿಂಡಿಯಲ್ಲಿ ಹಲ್ಲಿ–ಜಿರಲೆ ಕಾಣಿಸಿಕೊಳ್ಳುವುದು ಇಲ್ಲಿ ಸಾಮಾನ್ಯ. ಹಾಸಿಗೆ–ದಿಂಬು ಖರೀದಿಯಲ್ಲಿ 19 ಕೋಟಿ ರೂಪಾಯಿಗೂ ಹೆಚ್ಚಿನ ಅವ್ಯವಹಾರ ನಡೆದಿದೆ ಎನ್ನುವ ದೂರು ಇತ್ತೀಚೆಗಷ್ಟೇ ಕೇಳಿಬಂದಿತ್ತು. ಊಟದಲ್ಲೇ ಪಾಲು ಕೇಳುವಾಗ ದಿಂಬು–ಹಾಸಿಗೆ ಖರೀದಿಯಲ್ಲಿ ಲಂಚ–ರುಷುವತ್ತು ಇಲ್ಲದಿದ್ದರೆ ಹೇಗೆ?

ಅನೇಕ ಹಾಸ್ಟೆಲ್‌ಗಳು ಸಿಬ್ಬಂದಿಯ ಕೊರತೆಯನ್ನು ಎದುರಿಸುತ್ತಿವೆ. ಇರುವ ಅಲ್ಪಸ್ವಲ್ಪ ಸಿಬ್ಬಂದಿಯೂ ಕಾಯಂ ನೌಕರರೇನಲ್ಲ. ರಾತ್ರಿ ವೇಳೆ ವಾರ್ಡನ್‌ಗಳು ಇಲ್ಲದ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯಗಳೂ ಕರ್ನಾಟಕದಲ್ಲಿವೆ. “ಇರುಳಿನಲ್ಲಿ ಹೆಣ್ಣುಮಕ್ಕಳು ಬಯಲಿಗೆ ಬಹಿರ್ದೆಸೆಗೆ ಹೋರಬೇಕಾದ ಪರಿಸ್ಥಿತಿಯುಳ್ಳ ಹಾಸ್ಟೆಲ್‌ಗಳನ್ನೂ ಕಂಡಿದ್ದೇನೆ” ಎಂದು ವ್ಯವಸ್ಥೆಯ ನಕಾರಾತ್ಮಕ ಆಯಾಮವೊಂದನ್ನು ನಿರಂಜನಾರಾಧ್ಯರು ತೆರೆದಿಡುತ್ತಾರೆ.

### ಯಥಾ ಪಾಲಕ, ತಥಾ ಸಂತಾನ!

ಹಾಸ್ಟೆಲ್‌ಗಳು ನಾಯಿಕೊಡೆಗಳಂತೆ ಹಬ್ಬುತ್ತಿರುವುದರ ಜೊತೆಗೆ ವೃದ್ಧಾಶ್ರಮಗಳು ಹೆಚ್ಚುತ್ತಿರುವುದನ್ನೂ ಗಮನಿಸಬೇಕು. ಮಕ್ಕಳನ್ನು ಹಾಸ್ಟೆನ್‌ನಲ್ಲಿ ಬೆಳೆಸುವ ಪೋಷಕರ ತಲೆಮಾರು ಹೆಚ್ಚುತ್ತಿರುವಂತೆ, ಪೋಷಕರನ್ನು ವೃದ್ಧಾಶ್ರಮಗಳಿಗೆ ಬಿಡುವ ಯುವ ತಲೆಮಾರು ಹೆಚ್ಚಾಗುತ್ತಿದೆ ಎನ್ನುವ ಅಭಿಪ್ರಾಯವೊಂದಿದೆ. ವಿದ್ಯಾರ್ಥಿ ನಿಲಯಗಳಿಗೂ ವೃದ್ಧಾಶ್ರಮಗಳಿಗೂ ನಂಟು ಕಲ್ಪಿಸುವ ಈ ವಿಶ್ಲೇಷಣೆ – ಎರಡೂ ಕಡೆಗಳಲ್ಲಿ ಇರುವ ‘ಒಂಟಿತನ’ದ ಭಾವವನ್ನು ಸೂಚಿಸುವಂತಿದೆ.

ಒಂದಂತೂ ನಿಜ. ಹಾಸ್ಟೆಲ್‌ಗಳು ಹಾಗೂ ವೃದ್ಧಾಶ್ರಮಗಳು ನಾಗರಿಕ ಸಮಾಜಕ್ಕೆ ಅಗತ್ಯ. ಆದರೆ, ಅವುಗಳ ಸಂಖ್ಯೆ ಹೆಚ್ಚುವುದು ಹಾಗೂ ಅವು ಉದ್ಯಮದ ಸ್ವರೂಪ ತಳೆಯುವುದು ಆರೋಗ್ಯಕರ ಸಮಾಜದ ಲಕ್ಷಣವಂತೂ ಅಲ್ಲ.

ಕೊನೆಗೆ, ಪರಿಹಾರವಾಗದೆ ಉಳಿಯುವುದು ಅದೇ ಪ್ರಶ್ನೆ – ಮಕ್ಕಳನ್ನು ಹಾಸ್ಟೆಲ್‌ಗೆ ಕಳುಹಿಸಬೇಕಾ? ಬೇಡವಾ? ಎನ್ನುವುದು. ಇದಕ್ಕೆ ಉತ್ತರವನ್ನು ಆಯಾ ಪೋಷಕರೇ ಕಂಡುಕೊಳ್ಳಬೇಕು. ಹಾಸ್ಟೆಲ್ ಸೇರ್ಪಡೆಯಿಂದ ಮಕ್ಕಳಷ್ಟೇ ಕೌಟುಂಬಿಕ ವಾತಾವರಣದಿಂದ ವಂಚಿತರಾಗುವುದಿಲ್ಲ; ಪೋಷಕರು ಕೂಡ ತಮ್ಮ ಕರುಳುಬಳ್ಳಿಗಳ ಆಟ–ಪಾಠಗಳ ಅನುಭೂತಿಯಿಂದ ವಂಚಿತರಾಗುತ್ತಾರೆ. ಹಾಗಾಗಿ, ತಮ್ಮ ಮಕ್ಕಳಿಗೆ ಹಾಸ್ಟೆಲಿನ ಅಗತ್ಯ–ಅನಿವಾರ್ಯತೆ ಎಷ್ಟಿದೆ ಎನ್ನುವ ಬಗ್ಗೆ ಪಾಲಕರು ಸಾವಧಾನದಿಂದ ಯೋಚಿಸಿದಲ್ಲಿ ಉತ್ತರ ಹೊಳೆಯುವುದು ಕಷ್ಟವೇನಲ್ಲ. ■


ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ

ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450